ಶ್ವಾಸಕೋಶದ್ದೂ ಅದೇ ಪರಿಸ್ಥಿತಿ..." ಎಂದುಬಿಟ್ಟರು.

ರೋಗಿ ಸಂದೇಹದಿಂದ, ಭಯವಿಹ್ವಲನಾಗಿ, ನಡುಗುವ ದನಿಯಲ್ಲಿ, 'ಡಾಕ್ಟರೇ, ಏನಾದರೂ ಒಂದು ಚೂರು ಭರವಸೆ?..." ಎಂದು ಕೇಳಿದ. ಅವನ ದನಿಯಲ್ಲಿ, ತನಗೆ ಜಗತ್ತಿನಲ್ಲಿ ಮಾಡುವುದು ಇನ್ನೂ ಬೇಕಾದಷ್ಟಿದೆ, ತಾನು ಬದುಕುಳಿದರೆ ಮಾತ್ರ ಅದು ಸಾಧ್ಯ ಎನ್ನುವ ಭಾವನೆ ಇತ್ತು.

ಇದಾದ ಮೇಲೆ, "ಬೇರೆ ಯಾರ ನಂಬರ್ರೂ" ಎಂಬ ದನಿಯೊಂದಿಗೆ ಆಳು ಒಂದು ರೋಗಿಯನ್ನು ಇನ್ನೇನು ಕರೆದೊಯ್ಯುವವನೇ ಇದ್ದ. ರೋಗಿಯ ಭಯದಿಂದ ಕೂಡಿದ ಮುಖ ನೋಡಿ ತಮ್ಮ ಎರಡೂ ಹುಬ್ಬುಗಳ ಮಧ್ಯದ ಕೂದಲಿಲ್ಲದ ಭಾಗದ ಮೇಲೆ ತಮ್ಮ ಮುಷ್ಟಿಯಿಂದ ಹಗುರವಾಗಿ ತಟ್ಟಿಕೊಂಡು ವ್ಯಂಗ್ಯ ತುಂಬಿದ ನಗೆಯಲ್ಲಿ ವಿಶೇಷ ತಜ್ಞರಾದ ವೈದ್ಯರು, 'ಬದುಕಬೇಕೆಂದು ನಿಮಗೆ ತುಂಬಾ ಆಸೆಯಿದೆ... ನೀವೇನು ಭಾರೀ ಶ್ರೀಮಂತರೆ?' ಎಂದು ಕೇಳಿದರು.

ರೋಗಿಗೆ ಒಂದು ರೀತಿಯಲ್ಲಿ ಬಲ ಬಂದಂತಾಯಿತು. ತನ್ನ ಗುಳಿಬಿದ್ದ ಕಣ್ಣುಗಳನ್ನು ಕಷ್ಟದಿಂದ ಅರಳಿಸುತ್ತ ಕಣ್ಣೀರಿನಿಂದ ಗಂಟಲು ಕಟ್ಟಿದ ಸ್ವರದಲ್ಲಿ, ''ಹೌದು ಡಾಕ್ಟರ್, ನಾನು ಕೋಟ್ಯಧಿಪತಿ. ಹಣಕ್ಕೇನೂ ಕೊರತೆ ಇಲ್ಲ'' ಎಂದ.

''ಹಾಗಿದ್ದರೆ ಒಂದು ಕೆಲಸ ಮಾಡಿ...'' ಡಾಕ್ಟರು ಕುರ್ಚಿ ಮೇಲೆ ಒರಗಿಕೊಂಡಂತೆ ಮಾಡಿ, 'ನೀವು ಇದೇ ಆಂಬುಲೆನ್ಸ್‌ನಲ್ಲಿ ಕುಳಿತು ನೇರವಾಗಿ ಸ್ಟೇಷನ್‌ಗೆ ಹೋಗಿಬಿಡಿ. ಅಲ್ಲಿಂದ 11 ಗಂಟೆಗೆ ಇರುವ ಎಕ್ಸ್‌ಪ್ರೆಸ್ ಮೂಲಕ 'ಡೋವರ್'ಗೆ ಹೋಗಿ. ಅಲ್ಲಿಂದ ಹಡಗಿನಲ್ಲಿ 'ಕ್ಯಾಲೆಸ್' ಮತ್ತೆ 'ಮಾಸೋಈ'. ಅಲ್ಲಿಂದ ಹಾಟ್ ಸ್ಲೀಪಿಂಗ್ ಕಾರಿನಲ್ಲಿ 'ನಾಯಿಸ್'ಗೆ ಹೋಗಿ ಅಲ್ಲೇ ಇರಿ. ಆರು ತಿಂಗಳವರೆಗೂ ರೊಟ್ಟಿ, ಮದ್ಯ, ಹಣ್ಣು, ಮಾಂಸ, ಇದು ಯಾವುದನ್ನೂ ತೆಗೆದುಕೊಳ್ಳುವ ಹಾಗಿಲ್ಲ. ಬರೀ 'ವಾಟರ್ ಕ್ರಷ್' ತೆಗೆದುಕೊಳ್ಳಿ. ಒಂದು ದಿನ ಆದ ಮೇಲೆ ಒಂದು ಚಮಚ ಮಳೆ ನೀರಿಗೆ ಮೂರು–ನಾಲಕ್ಕು ಹನಿ ಅಯೋಡಿನ್ ಸೇರಿಸಿ ತೆಗೆದುಕೊಳ್ಳಿ. ನೋಡಿ ವಾಟರ್ ಕ್ರಷ್ ಹೊರತುಪಡಿಸಿ ಬೇರೆ ಇನ್ನೇನೂ ತೆಗೆದುಕೊಳ್ಳೋ ಹಾಗಿಲ್ಲ. ಇದನ್ನು ತುಂಬಾ ಚೆನ್ನಾಗಿ ಶೋಧಿಸಿಕೊಂಡು ಕುಡಿಯಬೇಕು. ನಿಮಗೆ ನಾನು ಹೆಚ್ಚು ಭರವಸೆಯನ್ನಂತೂ ಕೊಡೋಕ್ಕಾಗಲ್ಲ. ಇದೊಂದು ಛಾನ್ಸ್ ಮಾತ್ರ ಅಂತ ತಿಳಿದುಕೊಳ್ಳಿ. ಆ 'ಅಂದಾಜಿನ' ಚಿಕಿತ್ಸೆಯ ಹೆಸರನ್ನು ನಾನು ಬಹಳ ಕೇಳಿ ಇಟ್ಟಿದ್ದೀನಿ. ಇದರಿಂದ 'ಗುಣಮುಖ'ವಾಗುವುದು ಅಸಂಭವವೆಂದೇ ನನಗನ್ನಿಸುತ್ತದೆ. ಆದರೂ ನಿಮಗೆ ಹೇಳ್ತಾ ಇದ್ದೀನಿ. ಹೋಗಿ ನೋಡಿ. ದೈವಯೋಗದಿಂದ ಒಂದು ವೇಳೆ ನಿಮಗೆ ಗುಣವಾಯಿತು ಅಂದರೆ ಒಳ್ಳೆಯದು... ಇಲ್ಲ ಅಂದರೆ ಇನ್ನೇನು ಹೇಳಲಿ. ಪರೀಕ್ಷೆ ಮಾಡಿ ನೋಡಿ. ಪ್ರಪಂಚದಲ್ಲಿ ಹಲವು ವೇಳೆ ಅಸಂಭವ ಅನ್ನುವುದು ಸಂಭವವಾಗುತ್ತದೆ. ಒಳ್ಳೇದು. ಈಗ ಮುಂದಿನ ನಂಬರ್ ಯಾರದ್ದೂ?"

ರೋಗಿಗೆ ಸ್ವಲ್ಪ ಮಟ್ಟಿನ ಭರವಸೆ ಉಂಟಾಯಿತು. ಡಾಕ್ಟರರಿಗೆ ಮತ್ತೆ ಮತ್ತೆ ಧನ್ಯವಾದ ಹೇಳುತ್ತ ಅವನು ಆರ್ಡರ್ಲಿ ಜೊತೆಯಲ್ಲಿ ಹೊರಕ್ಕೆ ಹೋಗಿಬಿಟ್ಟ. ಮೇಲೆ ಹೇಳಿದ ಘಟನೆ ನಡೆದ ಆರು ತಿಂಗಳ ಅನಂತರ ಡಿಸೆಂಬರ್ ಮೂರನೇ ತಾರೀಕು ಒಂಬತ್ತು ಗಂಟೆಗೆ ಸರಿಯಾಗಿ ಬೆಲೆ ಬಾಳುವ ಫರ್ ಪೋಷಾಕು ಧರಿಸಿದ ಭಾರೀ ಆಕಾರದ ವ್ಯಕ್ತಿಯೊಬ್ಬ 'ನಂಬರ್ ಕಾರ್ಡ್' ತೆಗೆದುಕೊಳ್ಳದೆ ಶ್ರೇಷ್ಠ ಚಿಕಿತ್ಸಕ ಡಾ. ಹಿಲ್ ಅವರ ಕೋಣೆಯಲ್ಲಿ ಪ್ರತ್ಯಕ್ಷನಾದ... ಪುಷ್ಟವಾದ ಮಾಂಸಲ ತೋಳುಗಳು, ದೊಡ್ಡ ದೊಡ್ಡ ಅರಳಿದ ಕಣ್ಣುಗಳು, ವಿಶಾಲವಾದ ಎದೆ ಮತ್ತು ಬಲವಾದ ಹೆಜ್ಜೆಗಳು. ಬಹುಶಃ ಪೌರಾಣಿಕ ಇಲ್ಲವೆ ಅದ್ಭುತ ರಮ್ಯ ಕಥೆಗಳಲ್ಲಿ ಬರುವ ಯಾರೋ ಒಬ್ಬ ದೈತ್ಯ ಬಂದುಬಿಟ್ಟನೇನೋ ಎನ್ನುವಂತಿದ್ದ.

ಡಾಕ್ಟರ್ ಸಾಹೇಬರು ಆಗತಾನೆ ಕೊಠಡಿಯಲ್ಲಿ ಬಂದು ಕುಳಿತಿದ್ದರು. ಕರಿಯ ನಿಲುವಂಗಿ, ಉದ್ದನೆಯ ಉಣ್ಣೆ ಕೋಟನ್ನು ಧರಿಸಿದ್ದರು. ಗುಲಾಬಿಯ ನಸು ತಣ್ಣನೆಯ ಬೆಳಗಿನಲ್ಲಿ ಅವರ ದೇಹ ಸ್ವಲ್ಪ ನಡುಗುತ್ತಿರುವಂತೆ ತೋರುತ್ತಿತ್ತು. ಮೇಲೆ ಹೇಳಿದ ಆಗಂತುಕನು ತನ್ನ ಬಲಶಾಲಿಯಾದ ಬಾಹುಗಳಲ್ಲಿ ಮಕ್ಕಳ ಹಾಗೆ ಅವರನ್ನು ಎತ್ತಿ ಕಣ್ಣಿನಲ್ಲಿ ನೀರು ತುಂಬಿಕೊಂಡು ಗಾಢವಾಗಿ ಆಲಿಂಗಿಸಿಕೊಳ್ಳುತ್ತ, ಹಸಿರು ಆವರಣವುಳ್ಳ ಆರಾಮ ಕುರ್ಚಿಯ ಮೇಲೆ ಕೂರಿಸಿದ. ಡಾ. ಹಿಲ್ ಅವರ ಪರಿಸ್ಥಿತಿ ಆ ಸಮಯದಲ್ಲಿ ನಿಜಕ್ಕೂ ಜೀವವಿಲ್ಲದವರಂತಿತ್ತು. ತಮ್ಮ ಉಸಿರೇ ನಿಂತುಹೋಗುವುದೇನೋ ಎನ್ನುವಂತಾಯಿತು.

ಈ ಆಗಂತುಕನು ಡಾಕ್ಟರ್ ಅವರನ್ನು